ಮಂಡಲ ಪಂಚಾಯಿತಿ ಚುನಾವಣೆಗಳಲ್ಲಿ ಚುನಾವಣೆ ಸಂಕೇತಗಳು ಹಾಗೂ ಮತದಾನದ ಹಕ್ಕು

೩೨೨ (ಸಿ) ಶ್ರೀ ಕೆ. ಹೆಚ್. ಪಾಟೀಲ್(ಗದಗ).— ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ರಾಜ್ಯದಲ್ಲಿ ಇತ್ತೀಚೆಗೆ ನಡೆದ ಮಂಡಲ ಪಂಚಾಯಿತಿ ಚುನಾವಣೆಗಳಲ್ಲಿ ೧೮ ವರ್ಷದವರಿಗೆ ಮತದಾನದ ಹಕ್ಕನ್ನು ಮತ್ತು ಪಂಚಾಯಿತಿ ಮಟ್ಟದಲ್ಲಿ ಅಖಿಲ ಭಾರತ ಮಟ್ಟದ ಚುನಾವಣೆ ಸಂಕೇತ್ ಗಳನ್ನು ಆಯಾ ಪಕ್ಷಗಳಿಗೆ ಮಿಸಲಾಗಿಟ್ಟಿರುವುದನ್ನು ರಾಜ್ಯ ಸರ್ಕಾರದವರು ಪ್ರಯೋಗಾರ್ಥವಾಗಿ ಜಾರಿಗೆ ತರಲು ಇದ್ದಂತಹ ಕಾರಣಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್(ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು).—

ಅ) ಗ್ರಾಮ ಪಂಚಾಯಿತಿ, ತಾಲ್ಲೂಕು ಬೋರ್ಡ್ ಕಾಯಿದೆ, ಮುನಿಸಿಪಲ್ ಕಾರ್ಪೊರೇಷನ್ ಹಾಗೂ ಮುನಿಸಿಪಾಲಿಟಿ ಕಾಯಿದೆಗಳಲ್ಲಿ ಮತದಾನದ ಹಕ್ಕನ್ನು ೧೮ ವರ್ಷಕ್ಕೆ ಇಡಲಾಗಿದೆ. ಇದೇ ಆಧಾರದ ಮೇಲೆ ಜಿಲ್ಲಾ ಪರಿಷತ್ ಕಾಯಿದೆಯಲ್ಲೂ ಸಹ ಮತದಾನದ ಹಕ್ಕನ್ನು ೧೮ ವರ್ಷಕ್ಕೆ ಇಡಲಾಗಿದೆ. ಇನ್ನು ಚುನಾವಣಾ ಸಂಕೇತಗಳಿಗೆ ಸಂಬಂಧಿಸಿದಂತೆ ಮುನಿಸಿಪಲ್ ಕಾರ್ಪೊರೇಷನ್ ಚುನಾವಣಾ ನಿಯಮಗಳಲ್ಲಿ ಪಕ್ಷಗಳ ಸಂಕೇತಗಳನ್ನು ಅನುಸರಿಸಿ ಚುನಾವಣೆಗಳನ್ನು ನಡೆಸಲಾಗಿದೆ ಇದೇ ಆಧಾರದ ಮೇಲೆ ಮಂಡಲ ಪಂಚಾಯಿತಿ ಚುನಾವಣೆಗಳಲ್ಲಿಯೂ ಸಹ ಸಂಕೇತಗಳನ್ನು ಆಯಾ ಪಕ್ಷಗಳಿಗೆ ಕೊಟ್ಟು ಚುನಾವಣೆಗಳನ್ನು ನಡೆಸಲಾಗಿದೆ. ಈಗಾಗಲೇ ಮುನಿಸಿಪಲ್ ಕಾರ್ಪೊರೇಷನ್‌ಗಳ ಚುನಾವಣೆಗಳಲ್ಲಿ ಈ ಸಂಕೇತಗಳನ್ನು ಉಪಯೋಗಿಸಿರುವುದರಿಂದ ಇದು ಪ್ರಯೋಗಾರ್ಥವಾಗಿರುವುದಿಲ್ಲ

ಶ್ರೀ ಕೆ. ಎಚ್. ಪಾಟೀಲ್.— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ ಮಾತು ಸಮರ್ಪಕವಾಗಿದೆ, ಆದರೆ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕಾನ್‌ಸ್ಟಿಟ್ಯೂಷನ್‌ನಲ್ಲಿ ೨೧ ವರ್ಷ ವಯಸ್ಸಿನ ಮೇಲೆ ಇದ್ದವರಿಗೆ ಮತದಾನ ಮಾಡಲಿಕ್ಕೆ ಹಕ್ಕು ಇದೆ. ಮುನಿಸಿಪಾಲಿಟಿಗಳಿಗೆ ೧೮ ವರ್ಷಗಳು ಆಗಿರಬೇಕೆಂದು ಮಾಡಿದೆ. ಅವು ಸರ್ಕಾರದ ಕಕ್ಷೆಯಲ್ಲಿಯೇ ಬರುತ್ತವೆ. ನಾನು ಕೇಳುತ್ತಿರುವುದೇನೆಂದರೆ ೧೮ ವರ್ಷ ಆಗಿದ್ದು ಆರಿಸಿ ಹೋದ ಪ್ರತಿನಿಧಿಗಳು ಲೆಜಿಸ್ಲೇಚರ್ ಕೌನ್ಸಿಲ್‌ಗೆ ಮತದಾರರಾಗಲು ಅರ್ಹರೇ ? ಕಾನ್‌ಸ್ಟಿಟ್ಯೂಷನ್ ಒಳಗೆ ಮತದಾರರು ಯಾರು ಇರುತ್ತಾರೆ ಅವರಿಗೆ ಪ್ರತಿನಿಧಿಗಳನ್ನು ಆರಿಸಲಿಕ್ಕೆ ಅಧಿಕಾರ ಇರುತ್ತದೆ. ಆದನ್ನು ಬಿಟ್ಟು ಬಿಟ್ಟು ೨೨ ವರ್ಷದವನು ಆಗುತ್ತಾನೆ ಎಂದರೆ ಅದನ್ನು ಹೇಳಲು ನಿಮಗೆ ಅಧಿಕಾರ ಇದೆಯೇ ? ನಮ್ಮ ಲೆಜಿಸ್ಲೇಚರ್ ಕೌನ್ಸಿಲ್‌ನ ಹಕ್ಕಿಗೆ ಧಕ್ಕೆ ಬರುತ್ತದೆ. ಆದ್ದರಿಂದ ಇದನ್ನು ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.— ಪೀಪಲ್ಸ್ ರೆಪ್ರಸೆಂಟೇಷನ್ ಆಕ್ಟ್ ಪ್ರಕಾರ ೨೧ ವರ್ಷ ಗಳಾಗಿದ್ದರೆ ಮತದಾನ ಮಾಡಲು ಹಕ್ಕು ಇರುತ್ತದೆ. ಇದು ಅಸೆಂಬ್ಲಿ ಮತ್ತು ಪಾರ್ಲಿಮೆಂಟ್‌ಗೆ ಸೀಮಿತವಾಗಿರುತ್ತದೆ. ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಮತದಾನ ನೀಡತಕ್ಕಂಥದ್ದಕ್ಕೆ ಜನತಾ ಸರ್ಕಾರದಲ್ಲಿ ೧೮ ವರ್ಷದವರಿಗೆ ಮತದಾನದ ಹಕ್ಕು ನೀಡತಕ್ಕಂಥ ನೀತಿ ಇದೆ. ಆ ನೀತಿಯನ್ನು ಅನುಸರಿಸಿ ಮತದಾನಕ್ಕೆ ಹಕ್ಕು ಕೊಟ್ಟಿದೆ.

ಶ್ರೀ ಕೆ. ಎಚ್. ಪಾಟೀಲ್.— ನನ್ನ ಅಭಿಪ್ರಾಯದಲ್ಲಿ ತಾವು ಆಯ್ಕೆ ಮಾಡಿರತಕ್ಕಂಥ ಪ್ರತಿನಿಧಿ ಗಳು ಮತದಾನ ಮಾಡಲಿಕ್ಕೆ ಅನರ್ಹರಾಗಿರುತ್ತಾರೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಈಗಾದರೂ ಪರೀಕ್ಷೆ ಮಾಡಿ ಆದನ್ನು ತೆಗೆಯುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.— ೧೮ ವರ್ಷಗಳಾಗಿದ್ದರೆ ಸ್ಥಳೀಯ ಸಂಸ್ಥೆಗಳಿಗೆ ಮತದಾನ ಮಾಡುತ್ತಾರೆ. ಅಸೆಂಬ್ಲಿ ಮತ್ತು ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಮತದಾನ ಮಾಡಬೇಕಾದರೆ ೨೧ ವರ್ಷಗಳು ಆಗಿರಬೇಕು. ತಾವು ಹೇಳುವುದರಲ್ಲಿ ಏನಾದರು ತಾಂತ್ರಿಕ ಅಭಿಪ್ರಾಯವಿದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ.